# ಪರ್ಯಾಯ ಶೈಕ್ಷಣಿಕ ಯೋಜನೆ 2021–22

**ತರಗತಿ : 5** **ಮಾಹೆ : ಸೆಪ್ಟೆಂಬರ್–2021** **ಪ್ರಥಮ ಭಾಷೆ ಕನ್ನಡ**

| ಕ್ರ.ಸಂ | ತಿಂಗಳು / ವಾರ<br>ಪಾಠದ ಹೆಸರು | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಸೆಪ್ಟೆಂಬರ್ 1ನೇ ವಾರ**<br>**ಗದ್ಯ–2**<br>**ನದಿಯ ಅಳಲು** | * ಧ್ವನಿ ಸುರಳಿಯನ್ನು ಆಲಿಸಿ ಅರ್ಥೈಸಿಕೊಳ್ಳುವರು<br><br>* ಪಠ್ಯಭಾಗವನ್ನು ಅರ್ಥವತ್ತಾಗಿ ವಾಚಿಸುವರು<br><br>* ಜಲಮಾಲಿನ್ಯಕ್ಕೆ ಕಾರಣ ಮತ್ತು ದುಷ್ಪರಿಣಾಮವನ್ನು ವಿವರಿಸುವರು<br><br>* ಪದಸಂಪತ್ತನ್ನು ಹೆಚ್ಚಿಸಿಕೊಳ್ಳುವರು | * ಶಿಕ್ಷಕರು 'ನದಿಯ ಅಳಲು ಪಾಠ'ದ ಸಂಭಾಷಣೆಯನ್ನು ಧ್ವನಿ ಏರಿಳಿತದೊಂದಿಗೆ ರಸವತ್ತಾಗಿ ಹೇಳಿ ಧ್ವನಿ ಮುದ್ರಿಸಿ ವಿದ್ಯಾರ್ಥಿಗಳು ಈ ಧ್ವನಿ ಸುರಳಿಯನ್ನು ಆಲಿಸುವಂತೆ ಅನುಕೂಲಿಸುವುದು<br><br>* ವಿದ್ಯಾರ್ಥಿಯ ಭೇಟಿಯ ಸಮಯದಲ್ಲಿ ಶಿಕ್ಷಕರು ಪಾಠದ ವಿವರಣೆಯನ್ನು ತಿಳಿಸುವುದು<br>* ಮಕ್ಕಳಿಂದ ಪಾಠವಾಚನ ಮಾಡಿಸುವುದು<br><br>* ಜಲಮಾಲಿನ್ಯಕ್ಕೆ ಸಂಬಂಧಿಸಿದ ಚಿತ್ರಪಟಗಳನ್ನು ವಿದ್ಯಾರ್ಥಿಗಳಿಗೆ ತೋರಿಸುತ್ತಾ ಜಲಮಾಲಿನ್ಯ ಉಂಟಾಗುವ ಬಗೆ, ಮಲಿನ ನೀರಿನ ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ವಿವರಿಸುತ್ತಾ ವಿದ್ಯಾರ್ಥಿಗಳೊಂದಿಗೆ ಚರ್ಚಿಸುವುದು<br><br>* ಹೊಸ ಪದಗಳ ಪಟ್ಟಿ ತಯಾರಿಸಿ ಅರ್ಥ ವಿವರಿಸುವುದು. | * ಮೌಖಿಕ ಪ್ರಶ್ನೋತ್ತರ<br><br>* ಓದುವ ಪರೀಕ್ಷೆ<br><br>* ಚರ್ಚೆ, ಸಂವಾದ<br>* ಜಲಮಾಲಿನ್ಯ ಉಂಟಾಗುತ್ತಿರುವ ಚಿತ್ರಪಟ ರಚಿಸಲು ವಿದ್ಯಾರ್ಥಿಗಳಿಗೆ ಸೂಚಿಸಿ ಮೌಲ್ಯಮಾಪನ ಮಾಡುವುದು.<br><br>* ಹೊಸಪದಗಳಿಂದ ಸ್ವಂತವಾಕ್ಯ ರಚನೆ |

| | | | | |
|---|---|---|---|---|
| | | * ಸಂಯುಕ್ತಾಕ್ಷರದ ಅರ್ಥ ತಿಳಿಯುವರು<br><br>* ಸಂಯುಕ್ತಾಕ್ಷರವನ್ನು ಬಿಡಿಸಿ ಬರೆಯುವರು | * ಸ್ವರದ ಸಹಾಯದಿಂದ ವ್ಯಂಜನಕ್ಕೆ ವ್ಯಂಜನ ಸೇರಿಕೊಂಡು ಸಂಯುಕ್ತಾಕ್ಷರ (ಒತ್ತಕ್ಷರ) ಉಂಟಾಗುವ ರೀತಿಯನ್ನು ಪದವೊಂದನ್ನು ಬಿಡಿಸುವುದರ ಮೂಲಕ ತಿಳಿಸಿಕೊಡುವುದು<br>ಉದಾ: ಚಿಕ್ಕ= ಚ್+ಇ, ಕ್+ಕ್+ಅ<br>ಮುಕ್ತ= ಮ್+ಉ, ಕ್+ತ್+ಅ | * ಒತ್ತಕ್ಷರಗಳನ್ನೊಳಗೊಂಡ 10 ಪದಗಳನ್ನು ವಿದ್ಯಾರ್ಥಿಗಳಿಂದ ಬಿಡಿಸಿ ಬರೆಯಿಸಿ ಮೌಲ್ಯಮಾಪನ ಮಾಡುವುದು |
| | | * ಸಜಾತಿ ಹಾಗೂ ವಿಜಾತಿ ಸಂಯುಕ್ತಾಕ್ಷರಗಳನ್ನು ವಿಂಗಡಿಸುವರು | * ಸಜಾತಿ ಹಾಗೂ ವಿಜಾತಿ ಸಂಯುಕ್ತಾಕ್ಷರಗಳ ವ್ಯತ್ಯಾಸ ತಿಳಿಸಿಕೊಡುವುದು<br>* ನದಿಯ ಅಳಲು ಪಾಠದಲ್ಲಿ ಬರುವ 10 ಸಜಾತಿ ಮತ್ತು ವಿಜಾತಿ ಪದಗಳನ್ನು ಗುರ್ತಿಸಿ ಬರೆಯಲು ವಿದ್ಯಾರ್ಥಿಗಳಿಗೆ ಸೂಚಿಸುವುದು<br>* 5ನೇ ತರಗತಿ 'ಸಿರಿ ಕನ್ನಡ' ಪುಸ್ತಕದ ಪುಟ ಸಂಖ್ಯೆ 12 ರಲ್ಲಿ ಬರುವ ಸಜಾತಿ ಒತ್ತಕ್ಷರಕ್ಕೆ ಹಳದಿ ಬಣ್ಣ, ವಿಜಾತಿ ಒತ್ತಕ್ಷರಗಳಿಗೆ ಹಸಿರು ಬಣ್ಣ ಹಚ್ಚಲು ಸೂಚಿಸುವದು | * ಸಜಾತಿ ಹಾಗೂ ವಿಜಾತಿ ಸಂಯುಕ್ತಾಕ್ಷರಗಳ ಪಟ್ಟಿ ತಯಾರಿಕೆ<br>* 5ನೇ ತರಗತಿ ಸುಮೇರು ಅಭ್ಯಾಸ ಪುಸ್ತಕ–1 ರ ಪುಟ ಸಂಖ್ಯೆ 6,7,8,19,21,22,23,24,25,26,27,28,29,30,31,34 36,37,38,39,40,41,42 ಮತ್ತು 44 ರ ಅಭ್ಯಾಸ ಹಾಳೆಗಳು |
| | | * ಅಭಿಪ್ರಾಯವನ್ನು ವ್ಯಕ್ತಪಡಿಸುವರು | * 'ನದಿಯ ಅಳಲು' ಪಾಠದಲ್ಲಿ ಬರುವ ಒಟ್ಟು ಪಾತ್ರಗಳ ಸಂಖ್ಯೆ, ಅದರಲ್ಲಿ ತನಗಿಷ್ಟವಾದ ಪಾತ್ರ ಯಾವುದು? ಏಕೆ ಎಂದು ಮಗು ವಿವರಿಸಲು ಅನುಕೂಲಿಸುವುದು | * ಮಕ್ಕಳ ಅಭಿಪ್ರಾಯ ಆಲಿಸುವಿಕೆ |

| ಕ್ರ.ಸಂ | ತಿಂಗಳು / ವಾರ<br>ಪಾಠದ ಹೆಸರು | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಸೆಪ್ಟೆಂಬರ್ 2ನೇ ವಾರ**<br>**ಗದ್ಯ–3**<br>**ನಮ್ಮ ಮಾತು ಕೇಳಿ** | * ಪರಿಚಿತ ವಿಷಯದ ಬಗ್ಗೆ ನಿರರ್ಗಳವಾಗಿ ಮಾತನಾಡುವರು<br><br>* ಸ್ವ–ಬರಹವನ್ನು ಸ್ಪಷ್ಟವಾಗಿ ಓದುವರು<br><br>* ಪ್ರಾಣಿಗಳಿಗೂ ಸ್ವತಂತ್ರವಾಗಿ ಬದುಕುವ ಹಕ್ಕಿದೆ ಎಂಬುದನ್ನು ತಿಳಿಯುವರು<br><br>* ಸರಳ ಪ್ರಶ್ನೆಗಳಿಗೆ ಪಠ್ಯದಲ್ಲಿ ಉತ್ತರ ಹುಡುಕಿ ಬರೆದು ಓದುವರು<br><br>* ಸ್ಪಷ್ಟ ಓದು ಶುದ್ಧ ಬರಹದ ಕೌಶಲ ಹೊದುವರು | * ವಿದ್ಯಾರ್ಥಿಯು ತಾನು ನೆಮ್ಮದಿಯಿಂದಿರಲು ಮನೆ ಹಾಗೂ ಸುತ್ತಲ ಪರಿಸರ ಹೇಗಿರಬೇಕೆಂಬುದರ ಬಗ್ಗೆ ಒಂದು ನಿಮಿಷ ಮಾತನಾಡಿ ಧ್ವನಿ ಮುದ್ರಿಸಿ ಶಿಕ್ಷಕರಿಗೆ ಕಳುಹಿಸಲು ಸೂಚಿಸುವುದು<br><br>* ತನಗಿಷ್ಟವಾದ ಯಾವುದಾದರೂ ಎರಡು ಪ್ರಾಣಿಗಳ ಚಿತ್ರ ಸಂಗ್ರಹಿಸಿ ಅವುಗಳ ಬಗ್ಗೆ 4–5 ಸಾಲು ಬರೆದು ಓದಲು ವಿದ್ಯಾರ್ಥಿಗಳಿಗೆ ಅನುಕೂಲಿಸುವುದು<br><br>* ಮಕ್ಕಳ ಭೇಟಿ ಸಂದರ್ಭದಲ್ಲಿ ಆಯ್ದ ಪಾಠಭಾಗವನ್ನು ಧ್ವನಿ–ಏರಿಳಿತದೊಂದಿಗೆ ವಾಚಿಸಿ ಮಕ್ಕಳಿಂದ ಓದಿಸುವುದು ಪ್ರಾಣಿಗಳ ದೂರಿನ ಬಗ್ಗೆ ಚರ್ಚೆ ಸಂವಾದ ಮಾಡಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು. ವಿದ್ಯಾರ್ಥಿಯು ಪ್ರಾಣಿಗಳ ರಾಜನಾಗಿರುತ್ತಿದ್ದರೆ ಪ್ರತಿ ಪ್ರಾಣಿಯ ದೂರಿಗೆ ನೀಡಬಹುದಾಗಿದ್ದ ಪರಿಹಾರದ ಬಗ್ಗೆ ಕೇಳಿ ತಿಳಿಯುವುದು<br><br>* ಪಾಠದಲ್ಲಿರುವ ತನಗಿಷ್ಟವಾದ ಯಾವುದಾದರೊಂದು ಪ್ರಾಣಿಯು ಹಿಡಿದಿರುವ ಭಿತ್ತಿ ಪತ್ರವನ್ನು ವಿದ್ಯಾರ್ಥಿಯು ಅಚ್ಚುಕಟ್ಟಾಗಿ ಬರೆದು ಸ್ವರಭಾರದೊಂದಿಗೆ ಓದುವಂತೆ ಪ್ರೇರೇಪಿಸುವುದು | * ಮುದ್ರಿತ ಧ್ವನಿ ಆಲಿಸುವಿಕೆ<br><br>* ಚಿಂತನೆಯನ್ನು ಓರೆ ಹಚ್ಚುವುದು<br><br>* ಧ್ವನಿ ಏರಿಳಿತ ಗಮನಿಸುವುದು<br><br>* ಪ್ರಶ್ನೋತ್ತರದ ಅಭ್ಯಾಸಹಾಳೆ<br><br>* ಸ್ಪಷ್ಟವಾಗಿ ಓದುವುದನ್ನು ಗಮನಿಸುವುದು<br><br>* ವಿದ್ಯಾರ್ಥಿಯ ಮನೋಭಾವವನ್ನು ತಿಳಿಯುವುದು |

| | | | | |
|---|---|---|---|---|
| | | * ಭಿತ್ತಿ ಪತ್ರಗಳನ್ನು ಸ್ವರಭಾರಯುಕ್ತವಾಗಿ ಓದುವುದು ಮತ್ತು ಸಂಗ್ರಹಿಸುವುದು | * ವಿದ್ಯಾರ್ಥಿಯು ತಾನು ನೋಡಿರಬಹುದಾದ ವಿವಿಧ ಭಿತ್ತಿ ಪತ್ರಗಳನ್ನು ಸಂಗ್ರಹಿಸಲು ಮಾರ್ಗದರ್ಶನ ನೀಡುವುದು | * ಭಿತ್ತಿ ಪತ್ರ ಸಂಗ್ರಹ ಮತ್ತು ಸಂಗ್ರಹಿತ ಭಿತ್ತಿ ಪತ್ರಗಳ ಮೌಲ್ಯಮಾಪನ |
| | | * ಏಕವಚನ ಮತ್ತು ಬಹುವಚನ ರೂಪವನ್ನು ತಿಳಿಯುವರು | * 'ಒಂದು' ಎಂಬುದನ್ನು ಸೂಚಿಸಲು ಏಕವಚನ, ಒಂದಕ್ಕಿಂತ ಹೆಚ್ಚು ಎಂಬುದನ್ನು ಸೂಚಿಸಲು ಬಹುವಚನ ಬಳಸಲಾಗುತ್ತದೆ ಎಂಬುದನ್ನು ವಿವಿಧ ವಸ್ತುಗಳು, ಸ್ಥಳೀಯ ಸನ್ನಿವೇಶ, ಚಿತ್ರಗಳನ್ನು ಬಳಸಿ ಮಕ್ಕಳಿಗೆ ಅರ್ಥೈಸುವುದು | * ಸುಮೇರು–1, ಪುಟ ಸಂಖ್ಯೆ 57 ರ ಅಭ್ಯಾಸ ಹಾಳೆ<br>* ನೈಜ ಸನ್ನಿವೇಶ, ಸ್ಥಳೀಯ ವಸ್ತುಗಳ ಬಗ್ಗೆ ತೋರಿಸುತ್ತಾ ಏಕವಚನ–ಬಹುವಚನ ರೂಪದ ಉತ್ತರ ವಿದ್ಯಾಥಿಗಳಿಂದ ಪಡೆಯುವುದು |
| | | | * ಪಾಠದಲ್ಲಿ ಬರುವ ಪ್ರಾಣಿಗಳ ಬಹುವಚನ ರೂಪ ಬರೆಯಲು ಮಾರ್ಗದರ್ಶನ ನೀಡುವುದು | * 5ನೇ ತರಗತಿ ಅಭ್ಯಾಸ ಪುಸ್ತಕ–1 ಸುಮೇರುವಿನ ಪುಟ ಸಂಖ್ಯೆ 15,45,46,47,48,49,50 ಹಾಗೂ 55 ರ ಅಭ್ಯಾಸ ಹಾಳೆಗಳನ್ನು ಬಳಸಿಕೊಳ್ಳುವುದು. |

| ಕ್ರ.ಸಂ | ತಿಂಗಳು / ವಾರ<br>ಪಾಠದ ಹೆಸರು | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ಸೆಪ್ಟೆಂಬರ್ 3ನೇ ವಾರ<br>ಪದ್ಯ-2<br>ಸ್ವಾತಂತ್ರ್ಯದ ಹಣತೆ** | * ದೇಶಕ್ಕಾಗಿ ಹೋರಾಡಿದ ಹುತಾತ್ಮರಿಗೆ ಗೌರವ ಸಲ್ಲಿಸುವುದನ್ನು ಕಲಿಯುವರು<br><br>* ಕವಿ ಪರಿಚಯವನ್ನು ಸ್ವಂತ ವಾಕ್ಯಗಳಲ್ಲಿ ಮಾಡುವರು.<br><br>* ಪದ್ಯವನ್ನು ರಾಗಬದ್ಧವಾಗಿ ಹಾಡುವರು<br><br>* 'ಸ್ವಾತಂತ್ರ್ಯ' ಪದದ ಅರ್ಥವನ್ನು ಅರ್ಥೈಸುವರು<br><br>* ಶಬ್ಧ ಸಂಪತ್ತನ್ನು ಹೆಚ್ಚಿಸಿಕೊಳ್ಳುವರು<br><br>* ಸರಳ ಪ್ರಶ್ನೆಗಳಿಗೆ | * ಭಾರತದ ರೇಖಾಚಿತ್ರ ಬಿಡಿಸಿ ಅದರೊಳಗೆ ರಾಷ್ಟ್ರಪಿತ ಗಾಂಧೀಜಿ ಹಾಗೂ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ದೇಶಭಕ್ತರ ಭಾವಚಿತ್ರ ಅಂಟಿಸಿ, ಭಾರತ ಸ್ವಾತಂತ್ರ್ಯವಾದ ದಿನಾಂಕವನ್ನು ನಮೂದಿಸಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು<br><br>* ಕವಿ ಕೆ.ಎಸ್ ನಿಸಾರ್ ಅಹಮದ್ ರವರ ಭಾವಚಿತ್ರದೊಂದಿಗೆ ಕವಿ ಪರಿಚಯ ಬರೆದು ಓದುವಂತೆ ಪ್ರೇರೇಪಿಸುವುದು<br><br>* ಆಯ್ದ ಪದ್ಯಭಾಗವನ್ನು ಶಿಕ್ಷಕರು ರಾಗಬದ್ಧವಾಗಿ ಹಾಡಿ ಮಕ್ಕಳು ಅನುಕರಿಸಿ ಹಾಡುವಂತೆ ಅನುಕೂಲಿಸುವುದು<br><br>* ಭೇಟಿ ಸಂದರ್ಭದಲ್ಲಿ ಶಿಕ್ಷಕರು ವಿದ್ಯಾಥಿಗಳಿಗೆ ಸ್ವಾತಂತ್ರ್ಯ ಪದದ ಅರ್ಥ, ವಿವರಣೆಯನ್ನು ಸರಳವಾಗಿ ಮಾಡಿಕೊಡುವುದು<br><br>* ಪದ್ಯದಲ್ಲಿ ಬರುವ ಹೊಸಪದಗಳಿಗೆ ಶಬ್ದಕೋಶದ ಸಹಾಯದಿಂದ ಅರ್ಥಹುಡುಕಿ ಬರೆಯಲು ಮಾರ್ಗದರ್ಶನ ನೀಡುವುದು<br>ಉದಾ: ಮುಡಿ, ಅರಿವೆ, ಕುಂದು .......................... | * ಚಿತ್ರಪಟಗಳ ಬಳಕೆ<br><br>* ಕವಿ ಚಿತ್ರ ಪ್ರದರ್ಶನ & ಚರ್ಚೆ<br><br>* ಪದ್ಯವಾಚನ<br><br>* ವೀಡಿಯೋ ತುಣುಕುಗಳು & ಚಿತ್ರಪಟ ವೀಕ್ಷಣೆ<br><br>* ಸಮನಾರ್ಥಕ ಪದಗಳ ಪಟ್ಟಿ ತಯಾರಿಕೆ<br>* ವೀಡಿಯೋ ತುಣುಕುಗಳು ಮತ್ತು ಚಿತ್ರಪಟ ವೀಕ್ಷಣೆ |

| | | | | |
|---|---|---|---|---|
| | | ಪಠ್ಯದಲ್ಲಿ ಉತ್ತರ ಹುಡುಕಿ ಬರೆದು ಓದುವರು<br><br>* ರಾಗವಾಗಿ, ಸ್ವರಬದ್ಧವಾಗಿ ಓದುವ ಸಾಮರ್ಥ್ಯ ಮತ್ತು ತಾರ್ಕಿಕವಾಗಿ ಚಿಂತನೆ ಮಾಡುವರು<br><br>* ಲಿಂಗಗಳನ್ನು ವಿಂಗಡಿಸಿ ಬರೆಯುವ ಸಾಮರ್ಥ್ಯವನ್ನು ಹೊಂದುವರು | * ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಪದ್ಯದ ಭಾವಾರ್ಥದ ಬಗ್ಗೆ ಚರ್ಚಿಸುತ್ತಾ ಸರಳ ಪ್ರಶ್ನೆಗಳ ಮೂಲಕ ಪದ್ಯದ ಸಾರಾಂಶವನ್ನು ಉತ್ತರ ರೂಪದಲ್ಲಿ ಪಡೆಯುವುದು<br><br>* ಪದ್ಯದ ಎರಡು ಮತ್ತು ಮೂರನೇ ಪ್ಯಾರಾದ ಭಾವಾರ್ಥ ಬರೆಯಲು ವಿದ್ಯಾರ್ಥಿಗಳಿಗೆ ಸೂಚಿಸುವುದು.<br><br>* ಪದ್ಯದ ಒಂದು ಮತ್ತು ನಾಲ್ಕನೇ ಪ್ಯಾರಾದ ಪದ್ಯಭಾಗವನ್ನು ಧ್ವನಿಸುರಳಿಯಲ್ಲಿ ಆಲಿಸಿ ಕಂಠಪಾಠ ಮಾಡಲು ಅನುಕೂಲಿಸುವುದು<br><br>* ಶಿಕ್ಷಕರು ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕಲಿಂಗಗಳ ಬಗ್ಗೆ ವಿವರಿಸುತ್ತಾ 'ಗಂಡಸು' ಎಂಬ ಅರ್ಥಕ್ಕೆ ಪುಲ್ಲಿಂಗಗಳು. 'ಹೆಂಗಸು' ಎಂಬ ಅರ್ಥಕ್ಕೆ ಸ್ತ್ರೀಲಿಂಗಗಳು ಹಾಗೂ 'ಗಂಡಸು' ಹಾಗೂ 'ಹೆಂಗಸು' ಎಂಬ ಅರ್ಥದಿಂದ ಬಳಕೆಯಾಗದ ಪದಗಳೇ ನಪುಸಂಕ ಲಿಂಗಗಳೆಂಬುದನ್ನು ವಿವಿಧ ಮಿಂಚುಪಟ್ಟಿಗಳನ್ನು ಬಳಸಿ ವಿದ್ಯಾಥಿಗಳಿಗೆ ಅರ್ಥೈಸುವುದು | * ಪ್ರಶ್ನೋತ್ತರ ಅಭ್ಯಾಸ ಹಾಳೆ ಸಹಾಯದಿಂದ<br><br>* ಮುದ್ರಿತ ಧ್ವನಿ ಪ್ರಸಾರ ಮಾಡುವುದು<br><br>* 5ನೇ ತರಗತಿ ಸುಮೇರು ಅಭ್ಯಾಸ ಪುಸ್ತಕ 1 ರ ಪುಟ ಸಂಖ್ಯೆ 51,52,53,56,58 ಬಳಸಿಕೊಳ್ಳುವುದು |

**ಶಿಕ್ಷಕರಿಗೆ ಸೂಚನೆ:**

* ಶಿಕ್ಷಕರು ಸ್ವತಃ ಪರಿಣಾಮಕಾರಿ ಚಟುವಟಿಕೆಗಳನ್ನು ಆಯೋಜಿಸಿಕೊಳ್ಳಲು ಸ್ವತಂತ್ರರು
* ದೀಕ್ಷಾ ಆಪ್‌ನಲ್ಲಿ ದೊರೆಯುವ ಮೌಲ್ಯಮಾಪನ ಸಾಧನಗಳನ್ನು ಬಳಸಿಕೊಳ್ಳುವುದು
* ಸುಮೇರು ಪುಸ್ತಕದಲ್ಲಿ ನೀಡಿರುವ ಚಟುವಟಿಕೆಗಳನ್ನು ನೀಡಬಹುದು

**ಅಭ್ಯಾಸದ ಹಾಳೆ – 1**

**ಪಾಠದ ಹೆಸರು : ನದಿಯ ಅಳಲು** **ತರಗತಿ : 5**

---

☞ **ಬಿಟ್ಟ ಸ್ಥಳ ತುಂಬಿರಿ:**

1.ಮಲಿನ ನದಿಯು ಮನುಷ್ಯನ ಜೀವಕ್ಕೆ ______________________

1. ಉಪಕಾರಿ 2. ಸಹಕಾರಿ 3. ಅಪಾಯಕಾರಿ 4. ಆರೋಗ್ಯಕಾರಿ

2.ನಾನು __________ ಎಂಬ ಪಟ್ಟ ಧರಿಸುವ ಕಾಲ ದೂರವಿಲ್ಲ

1. ವಿಷಕನ್ಯೆ 2. ಸುಕನ್ಯೆ 3. ನಾಗಕನ್ಯೆ 4. ದೇವಕನ್ಯೆ

3. ಎಲ್ಲರೂ ನನ್ನನ್ನು ____________ ಶ್ರಮಿಸಬೇಕು

1. ಮಲಿನಗೊಳಿಸಲು 2. ಶುದ್ಧಗೊಳಿಸಲು 3. ಅಳಿಸಲು 4. ಬತ್ತಿಸಲು

☞ **ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿರಿ:**

1.ನದಿ ಶುದ್ಧವಾಗಿ ಹರಿಯುವಂತಾಗಲು ಏನು ಮಾಡಬಹುದು?

2.ಸ್ನಾನದ ಬಳಿಕ ಮಕ್ಕಳ ಸ್ಥಿತಿ ಏನಾಗಿತ್ತು?




☞ **ಬಿಟ್ಟ ಸ್ಥಳಗಳನ್ನು ಸೂಕ್ತ ಒತ್ತಕ್ಷರದಿಂದ ತುಂಬಿರಿ:**

1. ಎ ____ ರಿಕೆ 2. ಸೌಜ______

3. ಕ_____ರೆ 4. ಚಿಕಿ______

5. ಅಸ____

☞ **ಕೊಟ್ಟ ವ್ಯಂಜನಾಕ್ಷರಕ್ಕೆ ಒತ್ತಕ್ಷರ ಬರೆ:**



☞ **ಜಲಮಾಲಿನ್ಯದ ಚಿತ್ರ ಬಿಡಿಸಿ ಜಲಮಾಲಿನ್ಯದ ಬಗ್ಗೆ 4–5 ವಾಕ್ಯಗಳಲ್ಲಿ ವಿವರಿಸಿ**

☞ **ಕೊಟ್ಟ ಪ್ಯಾರಾದಲ್ಲಿನ ಒತ್ತಕ್ಷರಗಳನ್ನು ವಿಂಗಡಿಸಿ ಬರೆಯಿರಿ:**

ಸ್ವಲ್ಪ ದಿನಗಳ ಅನಂತರ ಅದೇ ಮರದ ದಾರಿಗೆ ಬಂದೆ. ಅಬ್ಬಾ! ಇನ್ನೂ ಒಂದು ವಿಚಿತ್ರ ಕಂಡೆ. ಹುಂಚಿ ಗಿಡದ ಇಳಿಬಿದ್ದ ಉದ್ದ ಟೊಂಗೆಗಳನ್ನು ಹಿಡಿದು ಕೆಲವು ಹುಡುಗಿಯರು ಜೋಕಾಲಿ ಜೀಕುತ್ತಿದ್ದರು. ಒಂದು ಕ್ಷಣ ನಿಂತೆ ಹೌದು! ನಾನು ಚಿಕ್ಕವನಿದ್ದಾಗ ಹೀಗೆಯೇ ಜೋಕಾಲಿ ಜೀಕುತ್ತಿದ್ದೆ

| ಸಜಾತಿ ಒತ್ತಕ್ಷರಗಳು | ವಿಜಾತಿ ಒತ್ತಕ್ಷರಗಳು |
|---|---|
| | |
| | |
| | |
| | |
| | |

# ಅಭ್ಯಾಸದ ಹಾಳೆ – 2

**ಪಾಠದ ಹೆಸರು : ನಮ್ಮ ಮಾತು ಕೇಳಿ** **ತರಗತಿ : 5**

☞ **ಕೊಟ್ಟ ಹೇಳಿಕೆ ಯಾವ ಪ್ರಾಣಿಯದು ಎಂದು ಯೋಚಿಸಿ ಬಿಟ್ಟ ಸ್ಥಳದಲ್ಲಿ ಬರೆಯಿರಿ:**

1. ದಯೆಯಿರಲಿ ಸಕಲ ಪ್ರಾಣಿಗಳಲ್ಲಿ ______________________
2. ರಕ್ಷಕರಾಗಿರಿ, ರಾಕ್ಷಸರಾಗದಿರಿ ______________________
3. ಸರಿಯಾಗಿ ಚಲಿಸಿರಿ, ಚಲಿಸಲು ಬಿಡಿ ______________________
4. ನೀವೂ ತಿನ್ನಿ, ನಮಗೂ ತಿನ್ನಲು ಬಿಡಿ ______________________

(ಎರೆಹುಳ, ನಾಯಿ, ಎತ್ತು, ಕರಡಿ )

☞ **ಒಂದು ವಾಕ್ಯದಲ್ಲಿ ಉತ್ತರಿಸಿ:**

1. ಎಲ್ಲಾ ಪ್ರಾಣಿಗಳಿಂದ ಆನೆಯು ಏನನ್ನು ಗಳಿಸಿತ್ತು?

______________________________________________

2. ಫಲಕಗಳನ್ನು ಎಲ್ಲಿ ಪ್ರದರ್ಶಿಸೋಣವೆಂದು ತೀರ್ಮಾನಿಸಿದವು?

______________________________________________

☞ **ದೋಣಿಯಲ್ಲಿರುವ ಪದಗಳನ್ನು ಸೂಕ್ತ ಕೋಷ್ಟಕದಲ್ಲಿ ಬರೆಯಿರಿ:**

| ಏಕವಚನ | ಬಹುವಚನ |
|---|---|
| | |
| | |
| | |
| | |
| | |

ಶಿಕ್ಷಕರು ಮಗು, ಗಿಡ, ಪುಸ್ತಕಗಳು

ಮನೆಗಳು, ಮರ, ಜನರು, ಶಾಲೆ,

ಹಲ್ಲು, ನದಿ, ಊರುಗಳು, ಓಲೆಗಳು

☞ **'ಕರೋನಾ' ಕಾಲದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮದ ಭಿತ್ತಿ ಪತ್ರವೊಂದನ್ನು ರಚಿಸಿರಿ**

**ಅಭ್ಯಾಸದ ಹಾಳೆ – 3**

**ಪಾಠದ ಹೆಸರು : ಸ್ವಾತಂತ್ರ್ಯದ ಹಣತೆ** **ತರಗತಿ : 5**

**☞ ಕೊಟ್ಟ ಪದಗಳಿಗೆ ಸಮಾನಾರ್ಥಕ ಪದ ಬರೆ:**

1. ಗೃಹ = ____________________
2. ತೈಲ= ____________________
3. ಹಣತೆ= ____________________
4. ಪಾಯ= ____________________

**☞ ಈ ಪದ್ಯ ಭಾಗವನ್ನು ಪೂರ್ಣಗೊಳಿಸಿರಿ:**

ಸದಾ____________________________________

________________________________________

________________________________ ಘನತೆ

**☞ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ:**

1. ಧೀರಶಕ್ತಿ ಉಳ್ಳವರು ಏನು ಮಾಡಬಲ್ಲರು?

   ________________________________________________________________

2. ನಮ್ಮ ಗಮನ ಯಾವುದರ ಕಡೆಗೆ ಸಲ್ಲಬೇಕು?

   ________________________________________________________________

**☞ ಕೊಟ್ಟಿರುವ ಪದಗಳಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಹಾಗೂ ನಪುಂಸಕಲಿಂಗಗಳನ್ನು ವಿಂಗಡಿಸಿ ಬರೆಯಿರಿ:**

ಶರಣ, ಅವನು, ಮಾವ, ಹಣತೆ, ಅಜ್ಜಿ, ಬೆಟ್ಟ, ಗೆಳತಿ, ರಾಜ, ಮರ, ಕುರ್ಚಿ, ಪುಸ್ತಕ, ಅಧ್ಯಕ್ಷ, ಶಿಕ್ಷಕಿ, ಗೌಡತಿ, ಸ್ನೇಹಿತ

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕಲಿಂಗ |
|---|---|---|
| | | |
| | | |
| | | |
| | | |

**☞ ನಿಮ್ಮ ಪೋಷಕರೊಂದಿಗೆ ಚರ್ಚಿಸಿ ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ 5–6 ವಾಕ್ಯಗಳಲ್ಲಿ ಬರೆ.**

**ಅಭ್ಯಾಸದ ಹಾಳೆ – 4**

**ಪಾಠದ ಹೆಸರು : ಸ್ವಾತಂತ್ರ್ಯದ ಹಣತೆ** **ತರಗತಿ : 5**

---

**☞ ಅಪೂರ್ಣ ಭಾಗವನ್ನು ಸೂಕ್ತ ಉತ್ತರದಿಂದ ಪೂರ್ಣಗೊಳಿಸಿರಿ:**

ಸ್ವಾತಂತ್ರ್ಯದ ಹಣತೆ ಪದ್ಯವನ್ನು ಬರೆದ ಕವಿ ______________________ ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ______________________ ಹಳ್ಳಿಯಲ್ಲಿ ದಿನಾಂಕ 05.02.____________ ರಂದು ಜನಿಸಿದರು. ತಂದೆ ____________________ ತಾಯಿ ____________________ ಇವರು ಮನಸು__________________, ನೆನೆದವರ________________, ನಿತ್ಯೋತ್ಸವ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ______________________ ಮತ್ತು ______________________ ಪ್ರಶಸ್ತಿ ಹಾಗೂ ಕೇಂದ್ರ ಮತ್ತು ರಾಜ್ಯ _________________ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

ಪ್ರಸ್ತುತ ಪದ್ಯವು ನಮಗೆ ಬಂದಿರುವ ಸ್ವಾತಂತ್ರ್ಯವನ್ನು ಸದಾ ________________ ಮಾಡಿಕೊಳ್ಳಬೇಕು. ನಮ್ಮ ದೇಶದ ____________________ ಗಾಗಿ ಸದಾ ದುಡಿಯುತ್ತಿರಬೇಕು. ____________________ ದಿಂದ ದೇಶದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಬೇಕು. ನಮ್ಮ ____________________ ಕಡೆಗೆ ಗಮನವಿರಬೇಕು. ದೇಶಕ್ಕಾಗಿ ಹೋರಾಡಿದ ______________________ ಗೌರವವನ್ನು ಸದಾ ಸಲ್ಲಿಸಬೇಕೆಂಬ ಆಶಯವನ್ನು ಹೊಂದಿದೆ.

**(ಗಾಂಧಿಬಜಾರು, ಸಾಹಿತ್ಯ ಅಕಾಡೆಮಿ, ಸಾಧನೆಯ, ಕೆ.ಎಸ್ ನಿಸಾರ್ ಅಹಮದ್, ಹುತಾತ್ಮರಿಗೆ, ಪಂಪ, ಅಭಿವೃದ್ಧಿ, ದೇವನ, ನಾಡೋಜ, ಹಮೀದಾ ಬೇಗಂ, ರಕ್ಷಣೆ, 1936, ಮನದಲ್ಲಿ, ಷೇಕ್ ಹೈದರ್, ಧೀರತನ)**